ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

4

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 28/10/20

# ಚಕ್ರಬಡ್ಡಿ ಮನ್ನಾ ಸಿಹಿ

## ವಿವಿಧ ಸಾಲಗಳ ಗ್ರಾಹಕರಿಗೆ ಕೇಂದ್ರದಿಂದ ದಸರೆ ಹಬ್ಬದ ಕೊಡುಗೆ

## 2 ಕೋಟಿ ವರೆಗಿನ ಸಾಲಗಳಿಗೆ ಅನ್ವಯ । ಮಾರ್ಗಸೂಚಿ ಬಿಡುಗಡೆ

**ನವದೆಹಲಿ:** ಕೊರೊನಾ ಕಾಲದಲ್ಲಿ ತೀವ್ರ ಸಂಕಷ್ಟಕ್ಕೀಡಾಗಿದ್ದ ಸಾಲ ಗ್ರಾಹಕರಿಗೆ ಕೇಂದ್ರ ಸರ್ಕಾರ ದಸರಾ ಗಿಫ್ಟ್ ನೀಡಿದೆ. ಸುಪ್ರೀಂಕೋರ್ಟ್‌ಗೆ ಈಗಾಗಲೇ ಹೇಳಿರುವಂತೆ, 2 ಕೋಟಿ ರೂ.ವರೆಗಿನ ಸಾಲಗಳ ಮೇಲಿನ ಚಕ್ರಬಡ್ಡಿಯನ್ನು ಮನ್ನಾ ಮಾಡುವುದಾಗಿ ಘೋಷಿಸಿದೆ. ಈ ಸಂಬಂಧ ಶನಿವಾರ ಅಧಿಕೃತವಾಗಿ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಅಷ್ಟೇ ಅಲ್ಲ, ಈ ಚಕ್ರಬಡ್ಡಿ ಸಾಲ ಮನ್ನಾ ಸೌಲಭ್ಯ ನವೆಂಬರ್ 5ರೊಳಗೆ ಎಲ್ಲರಿಗೂ ಸಿಗುವಂತೆ ಮಾಡಲಾಗುತ್ತದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಆದರೆ, ಇದು ಮಾರ್ಚ್‌ನಿಂದ ಆಗಸ್ಟ್ ಅಂತ್ಯದವರೆಗಿನ ಸಾಲದ ಕಂತುಗಳ ಮುಂದೂಡಿಕೆ ಅವಧಿಗೆ ಮಾತ್ರ ಅನ್ವಯವಾಗಲಿದೆ. ಹಾಗೆಯೇ, ಈ ಅವಧಿಯಲ್ಲಿ ಪ್ರತಿ ತಿಂಗಳು ಕಂತನ್ನು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಕಟ್ಟಿದ್ದ ಗ್ರಾಹಕರಿಗೂ ಅನ್ವಯಿಸಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಮೊದಲಿಗೆ ಬ್ಯಾಂಕುಗಳು ಗ್ರಾಹಕರ ಚಕ್ರಬಡ್ಡಿಯನ್ನು ಮನ್ನಾ ಮಾಡಬೇಕು. ನಂತರ ಕೇಂದ್ರ ಸರ್ಕಾರ ಈ ಹಣವನ್ನು ಆಯಾ ಬ್ಯಾಂಕುಗಳಿಗೆ ತುಂಬಿಕೊಡಲಿದೆ.

**ದೀಪಾವಳಿ ನಿಮ್ಮ ಕೈನಲ್ಲಿ ಎಂದಿದ್ದ ಸುಪ್ರೀಂ:** ಸಾಲ ಮೊರೊಟೋರಿಯಂ ಅವಧಿಯನ್ನು ಸ್ಥಗಿತ ಮಾಡಿದ ನಂತರ ಕೆಲವು ಗ್ರಾಹಕರು, ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಕಂತು ಪಾವತಿ ಮುಂದೂಡಿಕೆ ಅವಧಿಯನ್ನು ಇನ್ನಷ್ಟು ವಿಸ್ತರಣೆ ಮಾಡಬೇಕು ಮತ್ತು ಮೊರೊಟೋರಿಯಂ ಅವಧಿಯಲ್ಲಿನ ಚಕ್ರಬಡ್ಡಿಯನ್ನು ಕಡಿತ ಮಾಡಬೇಕು ಎಂದು ಮನವಿ ಮಾಡಲಾಗಿತ್ತು. ಮೊದಲಿಗೆ ಕೇಂದ್ರ ಸರ್ಕಾರ ಬಡ್ಡಿ ಮನ್ನಾಗೆ ಒಪ್ಪಿರಲಿಲ್ಲ. ಆದರೆ, ಮೊರೊಟೋರಿಯಂ ಅವಧಿಯನ್ನು ಬೇಕಾದರೆ ಬ್ಯಾಂಕುಗಳೇ ಎರಡು ವರ್ಷದ ವರೆಗೆ ವಿಸ್ತರಣೆ ಮಾಡಿಕೊಳ್ಳಬಹುದು ಎಂದಿತ್ತು. ನಂತರದಲ್ಲಿ ಕೇಂದ್ರ ಸರ್ಕಾರ ಚಕ್ರಬಡ್ಡಿ ಮನ್ನಾ ಮಾಡುವ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಹೇಳಿತ್ತು. ಆಗ ಸುಪ್ರೀಂಕೋರ್ಟ್ ಗ್ರಾಹಕರ ಸಿಹಿ ದೀಪಾವಳಿ ನಿಮ್ಮ ಕಡೆಯೇ ಇದೆ, ಬೇಗ ನಿರ್ಧಾರ ಕೈಗೊಳ್ಳಿ ಎಂದಿತ್ತು.

**6 ಸಾವಿರ ಕೋಟಿ ಹೊರೆ:** ಈ ಸೌಲಭ್ಯದಿಂದಾಗಿ ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ಸುಮಾರು 5.5 ಸಾವಿರ ಕೋಟಿಯಿಂದ 6 ಸಾವಿರ ಕೋಟಿ ರೂ.ಗಳ ವರೆಗೆ ಹೊರೆ ಬೀಳಬಹುದು ಎಂದು ಅಂದಾಜಿಸಲಾಗಿದೆ. ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಧರಿಸಲಾಗಿತ್ತು. ಆದರೆ, ಈ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿ ಇದ್ದುದರಿಂದ ಕೇಂದ್ರ ಸರ್ಕಾರ ಪ್ರಕಟಿಸಿರಲಿಲ್ಲ. ಈಗ ಸುಪ್ರೀಂಕೋರ್ಟ್‌ನ ಅನುಮತಿ ಮೇರೆಗೆ ಶುಕ್ರವಾರ ಅಧಿಕೃತವಾಗಿ ಮಾರ್ಗಸೂಚಿ ಹೊರಡಿಸಿದೆ.

### ಫಲಾನುಭವಿಗಳು ಯಾರು?

- ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಾಲಗಾರರು
- ಶೈಕ್ಷಣಿಕ ಸಾಲ ಪಡೆದ ಗ್ರಾಹಕರು
- ಮನೆ ನಿರ್ಮಾಣಕ್ಕಾಗಿ ಪಡೆದ ಸಾಲ
- ಗೃಹೋಪಯೋಗಿ ವಸ್ತುಗಳ ಖರೀದಿಗಾಗಿ ಮಾಡಿದ ಸಾಲ
- ವೃತ್ತಿಪರರು ಮಾಡಿರುವ ವೈಯಕ್ತಿಕ ಸಾಲ
- ವಾಹನಗಳ ಖರೀದಿಗಾಗಿ ಮಾಡಿದ ಸಾಲ
- ಕ್ರೆಡಿಟ್ ಕಾರ್ಡ್ ಮೇಲಿನ ಬಾಕಿ
- ಬಳಕೆ (ಉಪಭೋಗ) ಸಾಲ ಪಡೆದವರು.



### ಲೆಕ್ಕಾಚಾರ ಹೇಗೆ?

ಗ್ರಾಹಕರು ಪಡೆದ ಸಾಲದ ಮೇಲಿನ ಸರಳ ಬಡ್ಡಿ ಮತ್ತು ಚಕ್ರಬಡ್ಡಿಯನ್ನು ತಾಳೆ ಹಾಕಿ, ಇಲ್ಲಿ ವ್ಯತ್ಯಾಸ ಬರುವ ಹಣವನ್ನು ಗ್ರಾಹಕರ ಖಾತೆಗಳಿಗೆ ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳು ವಾಪಸ್ ಹಾಕುತ್ತವೆ. ಈ ಆರು ತಿಂಗಳ ಅವಧಿಯಲ್ಲಿ ಸಾಲ ವಾಪಸ್ ಮಾಡಿದವರಿಗೂ ಅನ್ವಯವಾಗುವಂತೆ ಮಾಡುವ ಸಲುವಾಗಿ, ಈ ಅವಧಿಯಲ್ಲಿ ಅವರು ಕಟ್ಟಿರುವ ಕಂತಿನ ಹಣವನ್ನು ನಿರ್ಲಕ್ಷ್ಯ ಮಾಡಲಾಗುತ್ತದೆ. ಈ ಮೂಲಕ ಅವರಿಗೂ ಯೋಜನೆಯ ಲಾಭ ಸಿಗುವಂತೆ ಮಾಡಲಾಗುತ್ತದೆ.

### ಎಸ್‌ಬಿಐ ನೋಡಲ್ ಏಜೆನ್ಸಿ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವನ್ನು ನೋಡಲ್ ಏಜೆನ್ಸಿಯನ್ನಾಗಿ ಮಾಡಲಾಗಿದೆ. ಈ ಬ್ಯಾಂಕಿಗೆ ಕೇಂದ್ರ ಸರ್ಕಾರ ಹಣವನ್ನು ಕಳುಹಿಸಲಿದೆ. ಇಲ್ಲಿಂದ ಇತರ ಬ್ಯಾಂಕುಗಳು ತಾವು ನೀಡಿದ ಪರಿಹಾರದ ಬಾಬ್ತುವನ್ನು ಪಡೆಯಬಹುದಾಗಿದೆ. ಮೊದಲಿಗೆ ಬ್ಯಾಂಕುಗಳು ತಮ್ಮ ಕ್ಲೇಮ್ ಅನ್ನು ಎಸ್‌ಬಿಐಗೆ ಸಲ್ಲಿಸಬೇಕು. ಇದು ಪರಿಶೀಲನೆ ಮಾಡಿ, ಬಳಿಕ ಪರಿಹಾರ ನೀಡಲಿದೆ.

### ಷರತ್ತುಗಳು ಅನ್ವಯ

ಹಣಕಾಸು ಸಚಿವಾಲಯ ಹೊರಡಿಸಿರುವ ಮಾರ್ಗಸೂಚಿಯಲ್ಲಿ ಯಾರಿಗೆಲ್ಲಾ ಈ ಸೌಲಭ್ಯ ಅನ್ವಯವಾಗಲಿದೆ ಹಾಗೂ ಯಾರಿಗೆ ಅನ್ವಯವಾಗುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಜತೆಗೆ, 2 ಕೋಟಿ ರೂ.ಗಳ ವರೆಗೆ ಸಾಲ ಪಡೆದವರಿಗಷ್ಟೇ ಈ ಸೌಲಭ್ಯ ಸಿಗಲಿದೆ. ದೊಡ್ಡ ಮಟ್ಟದ ಸಾಲ ಪಡೆದವರಿಗೆ ಅನ್ವಯಿಸುವುದಿಲ್ಲ. ಸಣ್ಣ ಮಟ್ಟದ ಸಾಲ ಗ್ರಾಹಕರನ್ನೇ ಗುರಿಯಾಗಿಸಿ ಈ ಸೌಲಭ್ಯ ನೀಡಲಾಗುತ್ತಿದೆ.

- ಫೆ.29ಕ್ಕೆ ಅನ್ವಯವಾಗುವಂತೆ ಗ್ರಾಹಕರು ಸಾಲದ ಕಂತಿನಿಂದ ತಪ್ಪಿಸಿಕೊಂಡಿರಬಾರದು.
- ಹಣಕಾಸು ಸಂಸ್ಥೆಗಳು ಎಂದರೆ ಬ್ಯಾಂಕುಗಳು, ಪಿಎಸ್‌ಬಿ, ಸಹಕಾರಿ ಬ್ಯಾಂಕುಗಳು ಮಾತ್ರ
- ಮಾ.1ರಿಂದ ಆ.30ರ ವರೆಗಿನ ಅವಧಿಗೆ ಮಾತ್ರ ಈ ಸೌಲಭ್ಯ ಅನ್ವಯ
- ನ.5ರೊಳಗೆ ಬ್ಯಾಂಕುಗಳು ಗ್ರಾಹಕರಿಗೆ ಈ ಯೋಜನೆಯ ಅನುಕೂಲ ಮಾಡಿಕೊಡಬೇಕು.
- ಡಿ.15ರೊಳಗೆ ಬ್ಯಾಂಕುಗಳು ಕೇಂದ್ರ ಸರ್ಕಾರದಿಂದ ತಾವು ಭರಿಸಿರುವ ಹಣ ಪಡೆಯಬಹುದು.